# ಜಾಕ್ವಲಿನ್‌ಗೆ ಫ್ಲಾಟ್ ಕೊಟ್ಟ ಸಲ್ಲೂ

ಸಲ್ಲೂ ಮಿಯಾನ ಬಡೇ ಹೃದಯದ ಕಥೆ ಎಲ್ಲರಿಗೂ ಗೊತ್ತಿರುವಂಥದ್ದೇ. ತಮಗೆ ಇಷ್ಟವಾದವರಿಗೆ ಕಾಣಿಕೆ ಕೊಡುವುದರಲ್ಲಿ ಸಲ್ಮಾನ್ ಖಾನ್‌ನದ್ದು ಎತ್ತಿದ ಕೈ. 'ಬಾಲಿವುಡ್ ಕರ್ಣ' ಎಂಬ ಕುಚೋದ್ಯವೂ ಸಲ್ಲೂ ಬಗ್ಗೆ ಇದೆ. ಸಲ್ಮಾನ್ ಹೃದಯ ಈಗ 'ಕಿಕ್' ಚಿತ್ರದ ಸಹನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರತ್ತ ಮಿಡಿದಿದೆ. ಸಲ್ಲೂ ಅಭಿಮಾನದಿಂದ ಜಾಕ್ವೆಲಿನ್‌ಗೆ ನೀಡಿರುವುದು ಮೂರು ಬೆಡ್‌ರೂಂಗಳಿರುವ ಫ್ಲಾಟ್ ಒಂದನ್ನು. ಅದೂ ಮುಂಬೈನ ಬಾಂದ್ರಾದಂಥ ದುಬಾರಿ ಸ್ಥಳದಲ್ಲಿ!

ಹೀಗೆ ಸಲ್ಲೂ ಭಾಯ್ ದುಬಾರಿ ಉಡುಗೊರೆ ನೀಡಿರುವುದು ಏಕೆ ಎಂಬುದೀಗ ಬಿ-ಟೌನಿನ ಬಿಸಿ ಬಿಸಿ ಚರ್ಚೆ. ಆಗಸ್ಟ್ 11ರಂದು ಜಾಕ್ವೆಲಿನ್‌ಳ ಜನ್ಮದಿನ. ಅದಕ್ಕೆ ಮುಂಗಡವಾಗಿಯೇ ಸಲ್ಲೂ ಉಡುಗೊರೆ ನೀಡಿರಬಹುದೇ? ಆದರೆ ಇದು ಹೊಸತಲ್ಲ. 'ರೆಡಿ' ಚಿತ್ರದ ನಾಯಕಿ ಆಸಿನ್‌ಗೂ ಸಲ್ಮಾನ್ ಹೀಗೆಯೇ ಫ್ಲಾಟ್ ನೀಡಿದ್ದುಂಟು. ಆದರೆ ಅದು ಇಷ್ಟೊಂದು ಸದ್ದು ಮಾಡಿರಲಿಲ್ಲ.

ಮೂಲಗಳ ಪ್ರಕಾರ ಸಲ್ಲೂ ಇತ್ತೀಚೆಗೆ ಜಾಕ್ವೆಲಿನ್ ಜೊತೆ ತುಸು ಹೆಚ್ಚೇ ಸಲುಗೆ ಹೊಂದಿದ್ದಾರೆ. 'ಕಿಕ್' ಇಬ್ಬರೂ ಒಟ್ಟಿಗೆ ನಟಿಸಿರುವ ಮೊದಲ ಚಿತ್ರವಾದರೂ, ಇಬ್ಬರೂ ಅನೇಕ ಬಾರಿ ಜೊತೆಯಾಗಿ ಹಲವು ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿದ್ದಾರೆ. ಮಾಧ್ಯಮದ ಮುಂದೆ ನಿಂತಾಗ ಪರಸ್ಪರ ಹೊಗಳಿಕೆಗೆ ಮಾತುಗಳನ್ನು ಮೀಸಲಿಡುತ್ತಿದ್ದಾರೆ. ಸಿದ್ಧಾರ್ಥ್ ಮಲ್ಹೋತ್ರಾ ಏರ್ಪಡಿಸಿದ್ದ 'ಏಕ್ ವಿಲನ್'ನ ಯಶಸ್ಸಿನ ಸಂತೋಷಕೂಟದಲ್ಲಿ ಸಲ್ಲೂ –ಜಾಕ್ವೆಲಿನ್ ಕಾಣಿಸಿಕೊಂಡಿದ್ದರು. ಇತ್ತೀಚೆಗಷ್ಟೇ ಸಲ್ಲೂ, ಆಕೆಯನ್ನು ಮಾದಕನಟಿ, ಮಾಜಿ ತಾರೆ ಜೀನತ್ ಅಮಾನ್ ಅವರಿಗೆ ಹೋಲಿಸಿದ್ದರು. ಜಾಕ್ವೆಲಿನ್ ಎಪ್ಪತ್ತರ ದಶಕದ ನಟೀಮಣಿಯರ ಸ್ಥಾನಕ್ಕೆ ಏರಲಿದ್ದಾರೆ ಎಂದೂ ಹೇಳಿದ್ದರು.

ಬಾಲಿವುಡ್ ಪ್ರಶ್ನೆ ಒಂದೇ- ಸಲ್ಲೂ ಭಾಯ್ ಮತ್ತೆ ಪ್ರೀತಿ ಪ್ರೇಮ ಅಂತ ಶುರುವಿಟ್ಟುಕೊಂಡಿದ್ದಾರೆಯೆ? ಗೊತ್ತಿಲ್ಲಪ್ಪ; ಜಾಕ್ವೆಲಿನ್ ಅಂತೂ ಈಗಾಗಲೆ ಬಾಂದ್ರಾದ ಹೊಸ ಫ್ಲಾಟ್‌ಗೆ ಶಿಫ್ಟ್ ಆಗಿದ್ದಾರೆ.






# ಕಾಲಿಗಿಂತ ಬೂಟು ದೊಡ್ಡದು!

ಈ ಪೀಠಿಕೆ ಹಾಕಲು ಕಾರಣ 'ಆಶಿಕಿ 2' ಚಿತ್ರದ ತಾರೆ ಶ್ರದ್ಧಾರ ನಡೆ. ಬಿ-ಟೌನಿನ ಮುಂಚೂಣಿ ತಾರೆಯರಾದ ದೀಪಿಕಾ ಪಡುಕೋಣೆ, ಕರೀನಾ ಕಪೂರ್, ಕತ್ರೀನಾ ಕೈಫ್, ಬಿಪಾಶಾ ಬಸು ಮುಂತಾದವರು ಯಾವ ಸಭೆ, ಸಮಾರಂಭಕ್ಕೆ ಹೋದರೂ ಹಮ್ಮುಬಿಮ್ಮು ತೋರಿಸದೆ ಛಾಯಾಗ್ರಾಹಕರಿಗೆ ಒಂದಷ್ಟು ಸಮಯ ಮೀಸಲಿಡುತ್ತಾರೆ. ಅವರ ಕ್ಯಾಮೆರಾ ಕಣ್ಣಿನ ಬೆಳಕು ಸಂತೃಪ್ತಗೊಂಡ ನಂತರವೇ ಈ ನಟಿಯರು ಮುಂದೆ ಸಾಗುವುದು. ಪತ್ರಿಕೆ, ಟೀವಿಗಳಷ್ಟೇ ಛಾಯಾಗ್ರಾಹಕರೂ ಮುಖ್ಯ ಎನ್ನುವುದನ್ನು ಹಾಲಿವುಡ್ ನಟಿಯರೂ ಮರೆಯುವುದಿಲ್ಲ.

ಅಂಥದ್ದರಲ್ಲಿ ಈಗಷ್ಟೇ ಎರಡನೇ ಸಿನಿಮಾದ ಯಶಸ್ಸಿನಲ್ಲಿ ಬೀಗುತ್ತಿರುವ ಶ್ರದ್ಧಾ ಕಪೂರ್ ಫೋಟೊಗೆ ಪೋಸು ನೀಡಲು ಒಲ್ಲೆ ಎಂದು ವಿವಾದ ಸೃಷ್ಟಿಸಿದ್ದಾರೆ. ತಮ್ಮ 'ಏಕ್ ವಿಲನ್' ಚಿತ್ರದ ಪ್ರಚಾರಕ್ಕೆ ಬಂದಿದ್ದ ಶ್ರದ್ಧಾ ಪೋಸು ಕೊಡುವಂತೆ ಛಾಯಾಗ್ರಾಹಕರ ಮನವಿಗೆ ಸ್ಪಂದಿಸಲೇ ಇಲ್ಲ.

ಶ್ರದ್ಧಾ ಈ ರೀತಿ ನಖರಾ ಮಾಡುವುದು ಇದೇ ಮೊದಲೇನಲ್ಲ. ಆದರೆ ಚಿತ್ರದ ಪ್ರಚಾರಕ್ಕಾಗಿಯೇ ಆಯೋಜಿಸಿರುವ ಸಮಾರಂಭದಲ್ಲಿ ಶ್ರದ್ಧಾ ವಿವಾದ ಸೃಷ್ಟಿಸಿರುವುದು ಚಿತ್ರ-ತಂಡಕ್ಕೆ ತಲೆನೋವಾಗಿ ಪರಿಣಮಿಸಿದೆ. ಶ್ರದ್ಧಾರ ಈ ನಡೆಯಿಂದ ಕೋಪಗೊಂಡ ಛಾಯಾ-ಗ್ರಾಹಕರು ಪ್ರತಿಭಟನೆಯನ್ನೂ ನಡೆಸಿದರು. ಸುದ್ದಿಗೋಷ್ಠಿಯಲ್ಲಿ ಯಾರೊಬ್ಬರೂ ಫೋಟೊ ಕ್ಲಿಕ್ಕಿಸಲಿಲ್ಲ. ನಿರ್ದೇಶಕ ಮೋಹಿತ್ ಸೂರಿ 'ಯಾಕೆ ಚಿತ್ರ ತೆಗೆಯುತ್ತಿಲ್ಲ' ಎಂದು ಕೇಳಿದಾಗ, 'ಶ್ರದ್ಧಾ ಫ್ರೇಮಿನಿಂದ ಹೊರಗಿದ್ದರೆ ಮಾತ್ರ ತೆಗೆಯುತ್ತೇವೆ' ಎಂದು ಪ್ರತಿಕ್ರಿಯಿಸಿದರು. ಸುದ್ದಿಗೋಷ್ಠಿ ನಂತರವೂ ಕ್ಯಾಮೆರಾ ಕಣ್ಣಿಗೆ ಶ್ರದ್ಧಾ ಸೆರೆಯಾಗದಂತೆಯೇ ಚಿತ್ರಗಳನ್ನು ತೆಗೆದರು. ಕೊನೆಗೆ ಶ್ರದ್ಧಾ ಮತ್ತು ಅವರ ಮ್ಯಾನೇಜರ್ ಸಮಸ್ಯೆ ಬಗೆಹರಿಸುವಂತೆ ಕೋರಿಕೊಂಡರೂ ಛಾಯಾಗ್ರಾಹಕರು ಆಕೆಯೊಂದಿಗೆ ಮಾತನಾಡಲು ನಿರಾಕರಿಸಿದರು. ಮುಂದೇನಾಗುತ್ತೋ ನೋಡಬೇಕು.

■ ಅಮಿ